ಗಮನ ಸೆಳೆಯುವ ಸೂಚನೆ

೧) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದಲ್ಲಿ ನಾರು ಹುಣ್ಣಿನ ಹಾವಳಿಯಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು.

ಶ್ರೀ ಚಂದ್ರಶೇಖರ್ ರೆಡ್ಡಿ ರೇಶ್ಮಂಪಲ್.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದಲ್ಲಿ ನಾರುಹುಣ್ಣಿನ ಹಾವಳಿಯಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದಲ್ಲಿ ನಾರು ಹುಣ್ಣಿನ ರೋಗಕ್ಕೆ ತುತ್ತಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತೆ ಇವೆ.

ವರ್ಷ	ಪ್ರಕರಣಗಳು
೧೯೮೫	೧೦೩
೧೯೮೬	೧೨೫
೧೯೮೭	೧೬೨

ಈ ಪ್ರಕರಣಗಳ ವಿವರಗಳನ್ನು ಪ್ರತಿ ವರ್ಷ ಜೂನ್ ಮತ್ತು ಡಿಸೆಂಬರ್ ಅಂತ್ಯದಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಪ್ರಸಕ್ತ ಸಾಲಿನ ವಿವರಗಳನ್ನು ಜೂನ್ ಅಂತ್ಯದಲ್ಲಿ ಪಡೆಯಲಾಗುವುದು.

ಈ ರೋಗಿಗಳ ಚಿಕಿತ್ಸೆಗಾಗಿ ಕೋಡ್ಲಾ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಔಷಧಿಗಳು, ಬ್ಯಾಂಡೇಜ್ ಬಟ್ಟೆ ಮತ್ತು ಇತರ ಸಲಕರಣೆಗಳನ್ನು ಆಗಿಂದಾಗ್ಗೆ ಕೊಡಲಾಗುತ್ತಿದೆ. ಈ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಕಾರ್ಯಕರ್ತರು ಈ ಪ್ರಕರಣಗಳು ಉಂಟಾದ ಮನೆಗಳಿಗೆ ಭೇಟಿ ನೀಡಿ ಪರೀಕ್ಷೆ ಮಾಡಿ ಅಗತ್ಯವಾದ ಚಿಕಿತ್ಸೆಯನ್ನು ಕೊಡುತ್ತಿರುವರು.

ಈ ನಾರು ಹುಣ್ಣು ರೋಗಕ್ಕೆ ಮೂಲ ಕಾರಣವಾದ ಹೊಕ್ಕು (Step wells) ತುಂಬುವ ಹನ್ನೊಂದು ಭಾವಿಗಳು ಈ ಊರಿನ ವ್ಯಾಪ್ತಿಯಲ್ಲಿ ಇದ್ದು, ಈ ಭಾವಿಗಳಲ್ಲಿ ಕುಡಿಯುವ ನೀರಿಗಾಗಿ ಇಳಿಯುವ ಜನರು ಈ ರೋಗಕ್ಕೆ ಪದೇ ಪದೇ ತುತ್ತಾಗುತ್ತಿರುವರು. ಈ ಭಾವಿಗಳ ನೀರಿಗೆ ಪ್ರತಿ ವರ್ಷ ಐದು ಬಾರಿ ಟೆಮೋಪೋಸ್ ಎಂಬ ಕ್ರಿಮಿನಾಶಕ ದ್ರವವನ್ನು ಆರೋಗ್ಯ ಕಾರ್ಯಕರ್ತರಿಂದ ಹಾಕಿಸಲಾಗುತ್ತಿದೆ. ಇದಂ ಅಲ್ಲದೆ, ಈ ಹೊಕ್ಕು ತುಂಬುವ ಭಾವಿಗಳಲ್ಲಿ ನೀರನ್ನು ಕಾಯಿಸಿ, ಶೋಧಿಸಿ ಕುಡಿಯಬೇಕೆಂದು ಆರೋಗ್ಯ ಶಿಕ್ಷಣ ಸಹ ಕೊಡಲಾಗುತ್ತಿದೆ.

ಈ ಹೊಕ್ಕು ತುಂಬುವ ಭಾವಿಗಳನ್ನು ಅತಿ ಜರೂರಾಗಿ ಸೇದುವ ಭಾವಿಗಳನ್ನಾಗಿ ಪರಿವರ್ತಿಸುವುದಕ್ಕೆ ಕಲಬುರ್ಗಿ ಜಿಲ್ಲೆಯ ನೀರಿನ ಆಯೋಗವು (Tecbinology Mission for water) ಮತ್ತು ಜನಾರೋಗ್ಯ ಇಲಾಖೆಯ ಮೂಲಕ (ಪಿಹೆಚ ೧) ಕಾರ್ಯಕ್ರಮವನ್ನು ಈಗಾಗಲೇ ಆಳವಡಿಸಿಕೊಂಡಿದೆ. ಅದರಂತೆ ಒಂದು ಭಾವಿಯ ಪರಿವರ್ತನೆ ಕೆಲಸ ಪ್ರಾರಂಭ ಮಾಡಿದ್ದು ಉಳಿದ ಎಲ್ಲಾ ಹೊಕ್ಕು ತುಂಬುವ ಭಾವಿಗಳನ್ನು ಸೇದುವ ಭಾವಿಗಳನ್ನಾಗಿ ಕೂಡಲೇ ಪರಿವರ್ತಿಸಲು ನೀರಿನ ಆಯೋಗದ ನಿರ್ದೇಶಕರಿಗೆ ಆರೋಗ್ಯ ಇಲಾಖೆಯಿಂದ ಮನವಿ ಮಾಡಿಕೊಳ್ಳಲಾಗಿದೆ.

ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ಸಾಂಕ್ರಾಮಿಕ ರೋಗಗಳು) ಅವರು ಇತ್ತೀಚೆಗೆ ಈ ಗ್ರಾಮಕ್ಕೆ ಮೂರು ಬಾರಿ ಭೇಟಿ ನೀಡಿ ನಾರು ಹುಣ್ಣು ರೋಗದ ಪ್ರಕರಣಗಳಿಗೆ ಚಿಕಿತ್ಸೆ ಮತ್ತು ಭಾವಿಗಳಲ್ಲಿ ನಿರ್ದಿಷ್ಟ ಅವಧಿಯಲ್ಲಿ ಟೆಮೋಪೊಸ್ ದ್ರವವನ್ನು ಹಾಕಿಸುವುದಕ್ಕೆ ವ್ಯವಸ್ಥೆ ಮಾಡಿರುವರು. ಇದೂ ಅಲ್ಲದೆ ಗುಲ್ಬರ್ಗಾ ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಂಟಿ ನಿರ್ದೇಶಕರನ್ನು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳನ್ನು ಈ ಗ್ರಾಮಕ್ಕೆ ಪದೇ ಪದೇ ಭೇಟಿ ನೀಡಿ ಈ ರೋಗಉಲ್ಬಣಿಸಿದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ. ಮೇಲ್ಕಂಡ ಕ್ರಮಗಳಿಂದ ನಾರು ಹುಣ್ಣಿನ ರೋಗದ ಪ್ರಕರಣಗಳನ್ನು ಕಡಿಮೆ ಮಾಡುವುದಲ್ಲದೆ ನಿರ್ಮೂಲಗೊಳಿಸಲು ಸಾಧ್ಯವಾಗುವುದು.